# ಕಾರ್ಯನಿರ್ವಾಹಕ ಸಾರಾಂಶ

ಪರಿಸರ ಪರಿಣಾಮ ಮೌಲ್ಯಮಾಪನದ ವರದಿ ಕುರಿತು
ಮಾಜಾಲಿ ಮೀನು ಬಂದರು ಅಭಿವೃದ್ಧಿ ಬಗ್ಗೆ
ಮಾಜಾಲಿ, ಕಾರವಾರ ತಾಲ್ಲೂಕು,
ಉತ್ತರ ಕನ್ನಡ ಜಿಲ್ಲೆ.

ಮೀನುಗಾರಿಕೆ ಇಲಾಖೆ,
ಮೀನುಗಾರಿಕಾ ಉಪ ನಿರ್ದೇಶಕರ ಕಛೇರಿ,
ಉತ್ತರ ಕನ್ನಡ ಜಿಲ್ಲೆ, ಕಾರವಾರ–581 301.

**ಸಮೋಲೋಚಕರು:**

ಮೇ//. ಮಿಟಕಾನ್ ಕನ್ಸ್‌ಲ್‌ಟೆನ್ಸಿ ಮತ್ತು ಎಂಜಿನಿಯರಿಂಗ್ ಸರ್ವೀಸ್ ಲಿಮಿಟೆಡ್, ಬೆಂಗಳೂರು.

**ಕಾರ್ಯನಿರ್ವಾಹಕ ಸಾರಾಂಶ**

## ಪರಿಚಯ:

ಮೀನುಗಾರಿಕೆ ಇಲಾಖೆಯು 1957ರಲ್ಲಿ ಸ್ಥಾಪಿತವಾಗಿದ್ದು ಸಾಗರ ಮತ್ತು ಒಳನಾಡಿನ ವಲಯದಲ್ಲಿ ಸಮೃದ್ಧ ಸಂಪನೂಲಗಳನ್ನು ಬಳಸಿಕೊಂಡು ಮೀನಿನ ಉತ್ಪಾದನೆ ಮಾಡಲಾಗುತ್ತದೆ. ಕರ್ನಾಟಕವು ಸುಮಾರು 5.93 ಲಕ್ಷ ಹೆಕ್ಟೇರ್ ಒಳನಾಡಿನ ನೀರಿನ ಸಂಪನ್ಮೂಲವನ್ನು, 8000 ಹೆಕ್ಟೇರ್ ಉಪ್ಪುನೀರು ಮತ್ತು 320 ಕಿ.ಮೀ. ಕರಾವಳಿಯಲ್ಲಿ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಕರಾವಳಿ ಜಿಲ್ಲೆ ಒಳಗೊಂಡು ಜೊತೆಗೆ 27000 ಚದರ ಕಿ.ಮೀ. ಭೂಖಂಡ ಶೆಲ್ಫ್ ಹೊಂದಿದೆ. ಕರ್ನಾಟಕದಲ್ಲಿ ಮೀನು ಉತ್ಪಾದನೆಯು ಎಂಬತ್ತರ ದಶಕದ ಆರಂಭದಲ್ಲಿ 2 ಲಕ್ಷ ಟನ್ ಇತ್ತು ಮತ್ತು ತೊಂಬತ್ತರ ದಶಕದ ಮಧ್ಯಭಾಗದಲ್ಲಿ 3 ಲಕ್ಷ ಟನ್ ತುದಿಯನ್ನು ತಲುಪಿತು. ಕಳೆದ 5 ವರ್ಷಗಳಲ್ಲಿ ಸರಾಸರಿ ಮೀನು ಉತ್ಪಾದನೆಯು 5 ಲಕ್ಷ ಟನ್ ಆಗಿರುತ್ತದೆ. ಇದರಲ್ಲಿ ಸಾಗರ ಕ್ಷೇತ್ರದಿಂದ 65% ಮತ್ತು ಒಳನಾಡಿನ ವಲಯದಲ್ಲಿ 32% ಕೊಡುಗೆ ವೃದ್ಧಿಯಾಗಿರುತ್ತದೆ. 2010–11 ರ ಭಾರತದ ಒಟ್ಟು ಮೀನು ಉತ್ಪಾದನೆಯಲ್ಲಿ ರಾಜ್ಯದ 5.80% ಕೊಡುಗೆಯಾಗಿರುತ್ತದೆ. ರಾಜ್ಯದ ತಲಾಧಾಯದ ಮೀನಿನ ಲಭ್ಯತೆ ಈಗಿನ ಮಟ್ಟಕ್ಕೆ ಸುಮಾರು 6.8 ಕೆ.ಜಿ. ಆಗಿರುತ್ತದೆ.

## ಯೋಜನೆಯ ಪ್ರತಿಪಾದಕರು:

ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮವನ್ನು 1970ರಲ್ಲಿ ಕಂಪನೀಸ್ ಆಕ್ಟ್ 1956 ಅಡಿಯಲ್ಲಿ ಸ್ಥಾಪಿಸಲಾಯಿತು. 30 ಲಕ್ಷ ಅದಿಕೃತ ಷೇರು ಬಂಡವಾಳದೊಂದಿಗೆ ಮತ್ತು ಪಾವತಿಯಾದ ಷೇರು ಬಂಡವಾಳ ರೂ. ಮೀನುಗಾರಿಕೆಯ ಕ್ಷೇತ್ರಗಲ ಬೆಳವಣಿಗೆಗೆ ಮತ್ತು ಮೀನುಗಾರರ ಕಲ್ಯಾಣಕ್ಕೆ 7.12 ಲಕ್ಷ ಮೀಸಲಿರಿಸಲಾಗಿದೆ. ಈ ನಿಗಮವು ದೇಶದಲ್ಲಿಯೇ ಅತ್ಯಂತ ಹಳೆಯ ನಿಗಮ ಮತ್ತು ಶೀತಲ ಸರಪಳಿ ಸ್ಥಾಪಿಸುವಲ್ಲಿ ಮುಂಚೂಣಿಯಲ್ಲಿದೆ. ಕರ್ನಾಟಕ ಒಳನಾಡಿನ ನಗರಗಳು ಮತ್ತು ಪಟ್ಟಣಗಳಲ್ಲಿ ಸಮುದ್ರ ಮೀನಿನ ಮಾರ್ಕೆಟಿಂಗ್ ಹೊಂದಿದೆ. ಇಲ್ಲಿ ಯಾಂತ್ರೀಕೃತ ದೋಣಿಗಳನ್ನು ನಿರ್ಮಿಸಿ ಸಮುದ್ರದಾಳದ ಮೀನುಗಾರಿಕೆ ಮಾಡುತ್ತಾರೆ.

## ಅಧ್ಯಯನದ ವ್ಯಾಪ್ತಿ:

ಈ ಪರಿಸರ ಪರಿಣಾಮದ ಮೌಲ್ಯಮಾಪನವನ್ನು ರಾಜ್ಯ ಪರಿಸರ ಅಪ್ರೈಸಲ್ ಕಮಿಟಿಯ ಸೇವಾನಿಭಂದನೆಯ ಪ್ರಕಾರ ತಯಾರಿಸಲಾಗಿದ್ದು ಅರಣ್ಯ ಮತ್ತು ಪರಿಸರದ ಮಂತ್ರಾಲಯದ ಮಾರ್ಗದರ್ಶನದಲ್ಲಿ ನಡೆದಿರುತ್ತದೆ.

ಅಧ್ಯಯನದ ವ್ಯಾಪ್ತಿಯು ಪರಿಸರ ಘಟಕಗಳ ವಿವರವಾದ ಲಕ್ಷಣಗಳನ್ನು ಒಳಗೊಂಡಿದೆ. ಪರಿಸರ ಮೌಲ್ಯಮಾಪನ ಉದ್ದೇಶಕ್ಕಾಗಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಳ್ಳಿಗಳ ಸಮೀಕ್ಷೆ ಮಾಡಲಾಗದೆ ಮತ್ತು ಸಂಬಂಧಿತ ದಾಖಲೆ ವಿವರಗಳನ್ನು ಸಂಗ್ರಹಿಸಲಾಗಿದೆ.

ಸೇವಾ ನಿಬಂಧನೆ ಪತ್ರದ ಸಂಖ್ಯೆ SEIAA 19 IND 2015 ದಿನಾಂಕ 5ನೇ ಆಗಸ್ಟ್ 2015.

## ಯೋಜನೆಯ ಸ್ಥಳ:

ಉದ್ದೇಶಿತ ಮೀನುಗಾರಿಕೆ ಬಂದರಿನ ಸ್ಥಳ ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ಗ್ರಾಮ ಮಾಜಾಲಿ ರೇಖಾಂಶ $14^0$ 53, 46.4’ ಉತ್ತರ ಮತ್ತು ಅಕ್ಷಾಂಶ $74^0$ 06, 49.7’ ಪೂರ್ವ ನಿಗದಿಯಾಗಿರುತ್ತದೆ.

### ಯೋಜನೆಯ ಗಾತ್ರ ಮತ್ತು ಕಾರ್ಯಾಚರಣೆಯ ಪರಿಣಾಮ:

### ಉತ್ಪನ್ನಗಳ ವಿವರಗಳು

| ಕ್ರಸಂ. | ಉತ್ಪನ್ನದ ಹೆಸರು | ಪ್ರಮಾಣ (ಟಿ.ಪಿ.ಎ.) |
|---|---|---|
| 1. | ಮೀನು ನಿರ್ವಹಣೆ | 10,000 |

**ಪರಿಸರ ವಿವರಣೆ:**

**ಪರಿಸರದ ಗುಣಮಟ್ಟದ ತಳಹದಿಯ ಸ್ಥಿತಿ:**

ಅಧ್ಯಯನದ ಅವಧಿ: ಅಧ್ಯಯನವನ್ನು ಡಿಸೆಂಬರ್ 2015 ದಿಂದ ಫೆಬ್ರವರಿ 2016ರ ಸಮಯದಲ್ಲಿ ನಡೆಸಲಾಯಿತು.

**ಅಧ್ಯಯನದ ಪ್ರದೇಶ:**

ಪರಿಸರದ ಮೇಲ್ವಿಚಾರಣೆಯ ಅಧ್ಯಯನ ಪ್ರದೇಶವು ಯೋಜನೆಯ ಸ್ಥಳದಿಂದ ಸುಮಾರು 10 ಕಿ.ಮೀ. ಪ್ರದೇಶದಲ್ಲಿ ಒಳಗೊಂಡಿದೆ. ಸ್ಥಳ ಪ್ರದೇಶವು ಭಾರತದ ಸರ್ವೇ 10 ಕಿ.ಮೀ. ತ್ರಿಜ್ಯ ಅಧ್ಯಯನ ಪ್ರದೇಶ ಟೋಪೋ ಶೀಟ್ ನಂ. 48ಜೆ/1 ಒಳಗೊಂಡಿರುತ್ತದೆ.

ಅಕ್ಷಾಂಶ: $14^0$ 53' 46.4"

ರೇಖಾಂಶ: $74^0$ 06' 49.7"

| ಕ್ರ.ಸಂ. | ವಿವರಗಳು | ಹೆಸರು | ವೈಮಾನಿಕ ದೂರ (ಯೋಜನಾಸ್ಥಳದಿಂದ) |
|---|---|---|---|
| 1. | ಬೌಗೋಳಿಕ ಸ್ಥಾನಗಳು | ಯೋಜನಾ ಪ್ರದೇಶ | ಅಕ್ಷಾಂಶ $14^0$ 53' 46.4" ರೇಖಾಂಶ $74^0$ 06' 49.7" |
| 2. | ಹತ್ತಿರದ ಹಳ್ಳಿ | ಮಾಜಾಲಿ | 2 ಕಿ.ಮೀ. |
| 3. | ಹತ್ತಿರದ ನಗರ | ಕಾರವಾರ | 13 ಕಿ.ಮೀ. |
| 4. | ಹತ್ತಿರದ ನದಿ | ಕಾಳಿನದಿ | 10 ಕಿ.ಮೀ. |
| 5. | ಹತ್ತಿರದ ಹೆದ್ದಾರಿ | ಎನ್.ಹೆಚ್.17 | 2.5 ಕಿ.ಮೀ. |
| 6. | ಹತ್ತಿರದ ವಿಮಾನ ನಿಲ್ದಾಣ | ಪಣಜಿ | 98 ಕಿ.ಮೀ. |
| 7. | ಹತ್ತಿರದ ರೈಲ್ವೇ ನಿಲ್ದಾಣ | ಕಾರವಾರ | 13 ಕಿ.ಮೀ. |
| 8. | ಹತ್ತಿರದ ಸಂರಕ್ಷಿತ ಅರಣ್ಯ ಮತ್ತು ಸೂಕ್ಷ್ಮಪ್ರದೇಶ | – | ಯಾವುದು ಇಲ್ಲ |

**ಪರಿಸರ ಗುಣಲಕ್ಷಣಗಳು ಮತ್ತು ಮಾನಿಟರಿಂಗ್ ಆವರ್ತನ**

| ಗುಣಲಕ್ಷಣಗಳು | ನಮೂನೆಗಳು | |
|---|---|---|
| | ಸ್ಥಳಗಳು | ನಿಯತಾಂಕಗಳು |
| ವಾಯು ಪರಿಸರ | | |
| ಪರಿಸ್ಥಿತಿಯ ವಾಯು ಗುಣಮಟ್ಟ | 07 ಸ್ಥಳಗಳು, ಯೋಜನಾ ಸ್ಥಳದಿಂದ 10 ಕಿ.ಮೀ. ಸುತ್ತಳತೆಯಲ್ಲಿ | ಡಿಸೆಂಬರ್ 2015 ರಿಂದ ಫೆಬ್ರವರಿ 2016 |
| ಶಬ್ಧ | 07 ಸ್ಥಳಗಳು, ಯೋಜನಾ ಸ್ಥಳದಿಂದ 10 ಕಿ.ಮೀ.ಸುತ್ತಳತೆಯಲ್ಲಿ | ಶಬ್ಧ ಮಟ್ಟ |
| ನೀರು | | |
| ಅಂತರ್ಜಲ | 9 ಸ್ಥಳಗಳು, ಯೋಜನಾ ಸ್ಥಳದಿಂದ 10 ಕಿ.ಮೀ. ಸುತ್ತಳತೆಯಲ್ಲಿ | ಭೌತಿಕ ಗುಣ, ರಾಸಾಯನಿಕ ಗುಣ, ಸೂಕ್ಷ್ಮಜೀವಗುಣ ಮತ್ತು ಹೆವ್ವಿ ಮೆಟಲ್ಸ್. |
| ಮೇಲ್ಮೈ ನೀರು | 06 ಸ್ಥಳಗಳು, ಯೋಜನಾ ಸ್ಥಳದಿಂದ 10 ಕಿ.ಮೀ. ಸುತ್ತಳತೆಯಲ್ಲಿ | – |
| ಮಣ್ಣು | 11 ಸ್ಥಳಗಳು, ಯೋಜನಾ ಸ್ಥಳದಿಂದ 10 ಕಿ.ಮೀ. ಸುತ್ತಳತೆಯಲ್ಲಿ | ಔತಿಕ ಗುಣ, ರಾಸಾಯನಿಕ ಮತ್ತು ಮಣ್ಣಿನ ರಚನೆ |

| | | |
|---|---|---|
| ಜೀವಶಾಸ್ತ್ರ ವಿವರ | ಯೋಜನಾ ಸ್ಥಳದಿಂದ 10 ಕಿ.ಮೀ. ಪರಿಧಿಯಲ್ಲಿ | ಅಸ್ತಿತ್ವದಲ್ಲಿರುವ ಸಸ್ಯ ಸಂಪತ್ತು ಮತ್ತು ಪ್ರಾಣಿ ಸಂಕುಲ. |
| ಸಾಮಾಜಿಕ ಆರ್ಥಿಕ ವಿವರ | ಯೋಜನಾ ಸ್ಥಳದಿಂದ 10 ಕಿ.ಮೀ. ಪರಿಧಿಯಲ್ಲಿ | ಸಾಮಾಜಿಕ ಆರ್ಥಿಕ ಗುಣಲಕ್ಷಣಗಳು ಪೀಡಿತ ಪ್ರದೇಶಗಳಲ್ಲಿ |

**ಪರಿಸರ ತಳಹದಿಯ ಸ್ಥಿತಿ:**

**ವಾಯು ಪರಿಸರ:**

ಅಧ್ಯಯನ ಪ್ರದೇಶದ ಸುತ್ತುವರೆದ ಗಾಳಿ ಗುಣಮಟ್ಟದ ಯೋಜನೆಯ ಸ್ಥಳ ಸುಮಾರು 10 ಕಿ.ಮೀ. ಪ್ರದೇಶದಲ್ಲಿ ಒಟ್ಟು ಎಂಟು ಸುತ್ತಲಿನ ವಾಯು ಗುಣಮಟ್ಟದ ನಿಲ್ದಾಣಗಳ ಅಂತರ್ಜಾಲವು ಡಿಸೆಂಬರ್ 2015 ರಿಂದ ಫೆಬ್ರವರಿ 2016 ರ ಸಮಯದಲ್ಲಿ ಅಂದಾಜು ಮಾಡಲಾಗಿದೆ.

PM 2.5, PM10, SO2 ಮತ್ತು NOX ಸಾಂದ್ರತೆಗಳು ರಾಷ್ಟ್ರೀಯ ಪರಿಸ್ಥಿತಿಯ ವಾಯು ಗುಣಮಟ್ಟದ ಒಳಗಡೆ ಕಂಡು ಬಂದಿರುತ್ತದೆ.

**ಶಬ್ಧ ಪರಿಸರ:**

ಕನಿಷ್ಠ ಶಬ್ಧ ಮಟ್ಟ 50.4 ಡಿಬಿ(ಎ) ಮತ್ತು ಗರಿಷ್ಠ ಶಬ್ಧ ಮಟ್ಟ 52.7 ಡಿಬಿ(ಎ) ದಿನ ಸಮಯದಲ್ಲಿ ಗಮನಿಸಲಾಗಿದೆ. ಕಾರ್ಖಾನೆಯ ಆವರನದಲ್ಲಿ ಮತ್ತು ಉಪನಗರ ಪ್ರದೇಶಗಳಲ್ಲಿ ವಾಹನ ದಟ್ಟಣೆ ಮತ್ತು ಇತರ ಚಟುವಟಿಕೆಗಳಿಂದಾಗಿ ಪ್ರಾಥಮಿಕವಾಗಿ ಹೆಚ್ಚಿನ ಶಬ್ಧ ಮಟ್ಟವು ಕಂಡುಬಂದಿರುತ್ತದೆ.

**ನೀರಿನ ಪರಿಸರ:**

ನೀರಿನ ಮಾದರಿಗಳನ್ನು ಬೋರ್‌ವೆಲ್, ಡಗ್‌ವೆಲ್, ನದಿ ಮತ್ತು ಸಾಗರದ ನೀರನ್ನು ಯೋಜನಾ ಪ್ರದೇಶದಲ್ಲಿ ಸಂಗ್ರಹಿಸಲಾಗಿದೆ.

**ಅಂತರ್ಜಲ ಮತ್ತು ಮೇಲ್ಮೈ ನೀರು:**

PH ಮೌಲ್ಯವು 6.75 ರಿಂದ 7.54 PH ನಡುವೆ ಗಮನಿಸಲಾಗಿದೆ ಮತ್ತು ಇದು ನಿರ್ದಿಷ್ಟ ಮಿತಿಯ ಒಳಗಡೆ ಕಂಡುಬರುತ್ತದೆ.

ಸರಾಸರಿ ಒಟ್ಟು ಕರಗಿಸುವ ಘನ ವಸ್ತುಗಳು 343 – 6350 mg/l ಮಿತಿಯಲ್ಲಿ ಕಂಡುಬಂದಿರುತ್ತದೆ. ಒಟ್ಟು ಕರಗಿಸುವ ಘನವಸ್ತುಗಳ ಸಾಂದ್ರತೆಯು ಎಲ್ಲಾ ಸ್ಥಳದಲ್ಲೂ ನಿರ್ಧಿಷ್ಠ ಮಿತಿಯಲ್ಲಿ ಕಂಡುಬಂದಿರುತ್ತದೆ.

ಸರಾಸರಿ ಒಟ್ಟು ಗಡಸುತನ 105 –1111 mg/l ಮಿತಿಯಲ್ಲಿ ಕಂಡುಬಂದಿರುತ್ತದೆ. ಕನಿಷ್ಠ ಮಟ್ಟವು ಗಾಜಲಿಬಾಗ್‌ನಲ್ಲಿ ಮತ್ತು ಗರಿಷ್ಠ ಮಟ್ಟವು ಕಾರವಾರದಲ್ಲಿ ಕಂಡುಬಂದಿರುತ್ತದೆ. ಗಡಸುತನವು ಎಲ್ಲಾ ಸ್ಥಳಗಳಲ್ಲಿ ನಿರ್ಧಿಷ್ಠ ಮಿತಿಯಲ್ಲಿ ಕಂಡುಬಂದಿರುತ್ತದೆ.

ಆಲ್ಕಾನಿಟಿ, ಕ್ಯಾಲ್ಸಿಯಂ ಮತ್ತು ಮೆಗ್ನೀಷಿಯಂ ಫಲಿತಾಂಶಗಳು ಅಪೇಕ್ಷಣೀಯ ಮಿತಿಯೊಳಗೆ ಕಂಡುಬಂದಿರುತ್ತದೆ.

ಎಲ್ಲಾ ಭಾರ ಲೋಹಗಳು ಶಿಪಾರಸ್ಸು ಮಾನದಂಡಗಲ ವ್ಯಾಪ್ತಿಯಲ್ಲಿ ಕಂಡು ಬಂದಿರುತ್ತದೆ. ವಿಷಕಾರಿ ಲೋಹಗಳು ವಿಶ್ಲೇಷಣೆಯ ಸಂದರ್ಭದಲ್ಲಿ ಯಾವುದೇ ಹಳ್ಳಿಯಲ್ಲೂ ಕಂಡುಬರುವುದಿಲ್ಲ.

ಸಾಗರದ ನೀರು:

ತಾಪಮಾನವು ಒಂದು ಪ್ರಮುಖ ನಿಯತಾಕಾರಕವಾಗಿದೆ. ಇದು ಜೀವಿಗಳ ಮೇಲೆ ಪ್ರಭಾವ ಬೀರಬಹುದಾಗಿದೆ. ನೀರಿನ ತಾಪಮಾನವು ವಾತಾವರನ ತಾಪಮಾನಕ್ಕಿಂತ ಕಡಿಮೆ ಇರುತ್ತದೆ.

PH ಬದಲಾವಣೆಯು 6.81 – 7.33 ನ ಪರಿಮಿತ ವ್ಯಾಪ್ತಿಯಲ್ಲಿದೆ. PH ಮೌಲ್ಯವು CO2, CO3-2 ಮತ್ತು HCO3-2 ಕಾರಣದಿಂದ ಬಫರ್ ಕ್ರಮದಿಂದ ನಿರ್ವಹಿಸುತ್ತದೆ.

ಲವಣಾಂಶವು 29100 – 56320 mg/l ವ್ಯಾಪ್ತಿಯಲ್ಲಿದ್ದು ನಿರೀಕ್ಷಿತ ಮೌಲ್ಯಗಳಿಗೆ ಸಮೀಪದಲ್ಲಿರುತ್ತದೆ.

ಕರಗಿದ ಆಮ್ಲಜನಕ (DO) ವು ಅತ್ಯಗತ್ಯ ನಿಯತಾಂಕವಾಗದೆ ಇದು ನೀರಿನ ಜೈವಿಕ ಘಟಕ ಪರಿಣಾಮ ಬೀರುತ್ತದೆ. ಕರಗಿದ ಆಮ್ಲಜನಕ ಮಟ್ಟದ ವ್ಯತ್ಯಾಸದಿಂದ ಬ್ಯಾಕ್ಟೀರಿಯಾದ ಜನಸಂಖ್ಯೆ ಮತ್ತು ಕ್ಲೋರೋವಿಲ್ಲಸ್ ಪೈಯಾಪ್ಲಾಂಕಟನ್ ಮೇಲೆ ಪರಿಣಾಮ ಬೀರುತ್ತದೆ. ಅಧ್ಯಯನದ ಅವಧಿಯಲ್ಲಿ ಗರಿಷ್ಠ ಸಮಯದಲ್ಲಿ DO ಮಟ್ಟ 5.6 ಮಿ.ಗ್ರಾಂ / ಲೀ ಅಗಿದ್ದು ನಿರೀಕ್ಷಿತ ಮೌಲ್ಯ ಪ್ರಕಾರ ಇದುವರೆಗೆ ದಾಖಲಾಗಿದೆ.

ಜೈವಿಕ ಆಮ್ಲಜನಕದ ಬೇಡಿಕೆಯು ಕಡಲ ಪರಿಸರ ಸನ್ನಿವೇಶದಲ್ಲಿ ವ್ಯಾಖ್ಯಾನಿಸಲು ಪ್ರಮುಖ ಮಾನದಂಡವಾಗಿದೆ ಮತ್ತು ಕರಗಿದ ಆಮ್ಲಜನಕದ ಮೇಲೆ ಪರಿಣಾಮ ಬೀರುತ್ತದೆ. ಜೈವಿಕ ಆಮ್ಲಜನಕದ ಬೇಡಿಕೆಯು 2ರಿಮದ 5 ಮಿ.ಗ್ರಾಂ /ಲೀ ನಡುವೆ ಕಂಡುಬರುತ್ತದೆ.

**ಮಣ್ಣು:**

ಪಿ.ಹೆಚ್.ಫಲಿತಾಂಶವು 6.4 ರಿಂದ 7.6 ಯ ಪರಿಮಿತಿಯಲ್ಲಿ ಕಂಡುಬಂದಿರುತ್ತದೆ. ಅಧ್ಯಯನದ ಸಂದರ್ಭದಲ್ಲಿ ಮತ್ತು ಎಲ್ಲಾ ಮಣ್ಣಿನ ಮಾದರಿಯಲ್ಲಿ ಪಿ.ಹೆಚ್. ತಟಸ್ಥಿತದಲ್ಲಿ ಕಂಡುಬಂದಿರುತ್ತದೆ.

ಸಾವಯವ ಇಂಗಾಲದ ಸಾಂದ್ರತೆಯು 0.62 ರಿಂದ 0.8% ವ್ಯಾಪ್ತಿಯಲ್ಲಿ ಕಂಡುಬಂದಿರುತ್ತದೆ.

ಒಟ್ಟು ಸಾರಜನಕ ವಿಶ್ಲೇಷಣೆ ಸರಾಸರಿ ಸಾಂದ್ರತೆಯು 0.5% ರಿಂದ 0.89% ವ್ಯಾಪ್ತಿಯಲ್ಲಿ ಕಂಡುಬಂದಿರುತ್ತದೆ. ಕನಿಷ್ಠ ಮೌಲ್ಯ ಡಾಪ್ತಮಾಲ್ ಪ್ರದೇಶದ ಮಣ್ಣಿನ ಮಾದರಿಯಲ್ಲಿ ಗಮನಿಸಲಾಗಿದೆ.

ಪಾಸ್ಪರಸ್ ಅಂಶವು 2.89% ರಿಂದ 4.48% ವ್ಯಾಪ್ತಿಯಲ್ಲಿ ಪತ್ತೆಯಾಗಿದೆ.

**ಸಾಮಾಜಿಕ ಆರ್ಥಿಕ ಪರಿಸರ:**

ಅಧ್ಯಯನದ ಪ್ರದೇಶದ ಜನಸಂಖ್ಯೆಯು 209170 ಇದ್ದು 55027 ಮನೆಗಳಲ್ಲಿ ವಾಸಿಸಿರುತ್ತಾರೆ. ಆನಸಂಖ್ಯೆಯ 104794 ಪುರುಷ (50.09%) ಮತ್ತು 104376 ನೇ (49.90%) ಒಳಗೊಂಡಿದೆ. ಅಧ್ಯಯನ ಪ್ರದೇಶದ ಎಲ್ಲಾ ಹಳ್ಳಿಗಳ ಪೈಕಿ ಹಾರ್ನ್‌ರೂಂಗ್ ಅಂದರೆ 96.6% ಹೆಚ್ಚಿನ ಸಾಕ್ಷರತಾ ಪ್ರಮಾಣ ಹೊಂದಿದೆ. ಅಧ್ಯಯನ ಪ್ರದೇಶದಲ್ಲಿ ಮಹಿಳೆಯರ ಸಾಕ್ಷರತೆ ಮತ್ತು ಪುರುಷ ಸಾಕ್ಷರತೆಯ ಮಧ್ಯ ವ್ಯೆತ್ಯಾಸ ಹೊಂದಿಲ್ಲ. ಮಹಿಳಾ ಸಾಕ್ಷರತಾ ಪ್ರಮಾಣವು ಸಾಮಾಜಿಕ ಬದಲಾವಣೆಗೆ ಪ್ರಮುಖ ಸೂಚಕವಾಗಿದೆ. ಪ್ರದೇಶದ ಔದ್ಯೋಗಿಕ ಮಾದರಿಯು ಮುಖ್ಯ + ಅಂಚಿನ ಮತ್ತು ಕಾರ್ಮಿಕರಲ್ಲದ ಶೇಕಡಾವಾರು ಕ್ರಮವಾಗಿ 37% ಮತ್ತು 63% ಎಂದು ತೋರಿಸುತ್ತದೆ.

ಮುಖ್ಯ ಕಾರ್ಮಿಕರ ಪೈಕಿ ಕೃಷಿ ಕಾರ್ಮಿಕರು (20%) ಇತರ ಕಾರ್ಮಿಕರು (10%) ಮತ್ತು ಮನೆಯಲ್ಲಿಯೇ ಶ್ರಮಿಸುವವರು (1%) ಮಾರ್ಜಿನಲ್ ಕಾರ್ಮಿಕರು 6% ಒಳಗೊಂಡಿರುತ್ತಾರೆ.

**ಪರಿಣಾಮ ಮತ್ತು ತಗ್ಗಿಸುವಿಕೆಯ ಕ್ರಮಗಳ ಸಾರಾಂಶ:**

**ವಾಯು ಪರಿಸರ:**

ಗಾಳಿಯಲ್ಲಿರುವ ಸಂಭವನೀಯ ಮೂಲಗಳು ಗುಡಿ ತೆಗೆಯುವುದು, ದಾಸ್ತಾನುಗಳು, ಉತ್ಖನನ ವಸ್ತುಗಳ ನಿರ್ವಹಣೆ ಮತ್ತು ನೆಲಸಮಗೊಳಿಸುವಿಕೆ ಇರಬಹುದು.

ವಾಯು ಮಾಲಿನ್ಯ ಕಾರಕಗಳಾದ ಘನವಸ್ತುಗಲು, ಸಲ್ಫರ್ ಆಕ್ಸೈಡ್, ನೈಟ್ರಸ್ ಆಕ್ಸೈಡ್, ಹೈಡ್ರೋಕಾರ್ಬನ್ ಮತ್ತು ಕಾರ್ಬನ್ ಮಾನಾಕ್ಸೈಡ್‌ಗಳು ಜನರೇಟರ್‌ಗಳಿಂದ, ಸಾರಿಗೆ ವಾಹನಗಳಿಂದ ಮತ್ತು ಇತರೆ ಯಂತ್ರಗಳಿಂದ ಹೊರಹೊಮ್ಮುತ್ತವೆ.

**ತಗ್ಗಿಸುವಿಕೆಯ ಕ್ರಮಗಳು:**

ನಿರ್ಮಾಣ ಹಂತದಲ್ಲಿ ಮುಖ್ಯವಾಗಿ ಮಣ್ಣಿನ ರಸ್ತೆ, ದಾಸ್ತಾನು ರಾಶಿ, ಉತ್ಖನನ ಮಣ್ಣಿನ ವಸ್ತುಗಳು ಇತ್ಯಾದಿ ಚಟುವಟಿಕೆಗಳ ಸಮಯದಲ್ಲಿ ನೀರನ್ನು ಪ್ರೋಕ್ಷಣೆ ಮಾಡಬೇಕಾಗುತ್ತದೆ.

ಭೂಶೋಧನೆ ಮತ್ತು ಅಗೆದ ಮಣ್ಣಿನ ವಸ್ತುಗಳನ್ನೂ ಸರಿಯಾಗಿ ಮುಚ್ಚಿ ಸಂಗ್ರಹ ಪ್ರದೇಶದಲ್ಲಿ ಸಂಗ್ರಹಿಸಿ ಇಡಬೇಕಾಗುತ್ತದೆ.

ಉಪಕರಣ ಮತ್ತು ಯಂತ್ರೋಪಕರಣಗಳಿಂದ ವಿಸರ್ಜನೆಯನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಬೇಕು. ಯಂತ್ರೋಪಕರಣಗಳನ್ನು ಆಗತ್ಯವಿಲ್ಲದಿದ್ದಾಗ ಆರಿಸಿ ಇಡಬೇಕು.

**ಶಬ್ಧ ಪರಿಸರ:**

**ನಿರೀಕ್ಷಿತ ಪರಿಸರ ಪರಿಣಾಮಗಳು:**

ಪರಿಸರದ ಮೇಲೆ ಕ್ರೇನ್‌ಗಳಿಂದ, ಅಗೆಯುವ ಯಂತ್ರದಿಂದ, ಟ್ರೈಲರ್‌ಗಳಿಂದ ಡೋಜರಸ್ಸ್ ಹಾಗೂ ಸೀಮೆಂಟ್ ಕಾಂಕ್ರೀಟ್ ಕನ್ವೇಯರ್ ಇತ್ಯಾದಿ ಕಾರ್ಯಾಚರಣೆಯಿಂದ ಪ್ರಭಾವಿಯಾಗಿರುತ್ತದೆ.

ತಗ್ಗಿಸುವಿಕೆಯ ಕ್ರಮಗಳು:

ಎಲ್ಲಾ ತರಹದ ಸಾರಿಗೆ ವಾಹನಗಳಿಗೆ ಶಬ್ದ ಕಡಿಮೆ ಇರುವ ಹಾರ್ನ್‌ಗಳನ್ನು ಅಳವಡಿಸಿರಬೇಕು. ಸಾರಿಗೆ ಚಟುವಟಿಕೆಗಳನ್ನು ರಾತ್ರಿಯ ಸಮಯದಲ್ಲಿ ಕಟ್ಟುನಿಟ್ಟಾಗಿ ನಿರ್ಭಂದಿಸಿಬೇಕು.

ನಿರ್ಮಾಣ ಯಂತ್ರಗಳು ಉತ್ತಮ ಕಾರ್ಯನಿರ್ವಹಣಾ ಸ್ಥಿತಿಯಲ್ಲಿ ಮತ್ತು ಎಂಜಿನ್ ಬಳಕೆಯಲ್ಲಿ ಇರದಾಗ ಆಫ್ ಮಾಡಿರಬೇಕು. ಪಿ.ಪಿ.ಇ. ಯನ್ನು ಕೆಲಸಗಾರರಿಗೆ ನೀಡಬೇಕು.

ಭೂಮಿ ಪರಿಸರ:

**ನಿರೀಕ್ಷಿತ ಪರಿಸರ ಪರಿಣಾಮಗಳು:**

ನಿರ್ಮಾಣ ಮತ್ತು ಹೂಳೆತ್ತುವಾಗ, ವಸ್ತು ವಿಲೇವಾರಿ ಮತ್ತು ಜಟ್ಟಿ ನಿರ್ಮಾಣ ಸಮಯದಲ್ಲಿ ಇತ್ಯಾದಿ ಚಟುವಟಿಕೆಗಳಿಂದ ಭೂದೃಶ್ಯ ಬದಲಾಗುತ್ತದೆ.

**ತಗ್ಗಿಸುವಿಕೆ ಕ್ರಮಗಳು:**

ನಿರ್ಮಾಣ ಅವಶೇಷಗಳು ಮತ್ತು ಹೆಚ್ಚುವರಿ ಉತ್ಖನನ ವಸ್ತುಗಳನ್ನು ಸೂಕ್ತ ಪೂರ್ವ ಗುರುತಿಸಲ್ಪಟ್ಟ ತಗ್ಗು ಪ್ರದೇಶಗಳಲ್ಲಿ ಹಾಕಿರಬೇಕು. ಹೂಳೆತ್ತಲ್ಪಟ್ಟ ಕೆಲವು ವಸ್ತುಗಳನ್ನು ವಸ್ತು ಸುಧಾರಣೆ ಕೆಲಸಕ್ಕೆ ಬಳಸಬಹುದು.

ಸಂಗ್ರಹಣೆ ಮತ್ತು ನಿರ್ಮಾಣ ವಸ್ತುಗಳ ಸೋರಿಕೆಯನ್ನು ತಡೆಗಟ್ಟಬೇಕು. ಹೂಳೆತ್ತಿದ್ದ ಭೂಮಿಯ ಮಣ್ಣನ್ನು ಪ್ಲಾಸ್ಟಿಕ್ /ಫಿಲ್ಮ್ ಹಾಳೆಗಳಿಂದ ಮುಚ್ಚಿ ಅದನ್ನು ಹಸಿರು ಪಟ್ಟಿ ಅಭಿವೃದ್ಧಿಗೆ ಮರುಬಳಕೆ ಮಾಡಬಹುದು.

**ನೀರಿನ ಪರಿಸರ:**

**ನಿರೀಕ್ಷಿತ ಪರಿಸರ ಪರಿಣಾಮಗಳು:**

ಆಕಸ್ಮಿಕ ಇಂಧನ ಸೋರುವಿಕೆ ಮತ್ತು ಸಾವಯವ ಘನ ವಸ್ತುಗಳ ಸವಳಿಕೆಯಿಂದ ಮೇಲ್ಮೈ ನೀರಿನ ಗುಣಮಟ್ಟದ ಮೇಲೆ ಪರಿಣಾಮ ಬೀರಬಹುದು.

ನಿರ್ಮಾಣ ಚಟುವಟಿಕೆಯಿಂದ ಕೆಸರು ನೆರೆಯ ನೀರಿನ ಮೇಲೆ ಬೀಳುವುದರಿಂದ ದ್ಯುತಿಸಂಶ್ಲೇಷಕ ಚಟುವಟಿಕೆಯ ವೇಗದ ಮೇಲೆ ಪರಿಣಾಮ ಬೀರುತ್ತದೆ.

**ತಗ್ಗಿಸುವಿಕೆ ಕ್ರಮಗಳು:**

ನಿರ್ಮಾಣ ವಸ್ತುಗಳ ಸ್ಟೋರೇಜ್ (ಪ್ರದೇಶವು) ಕರಾವಳಿ ಪ್ರದೇಶದಿಂದ ಸಾಕಷ್ಟು ದೂರ ಇರಬೇಕು. ಇದರಿಮದ ಸೋರುವಿಕೆಯ ತಪ್ಪಿಸಲು ಮಾಲಿನ್ಯ ಮತ್ತು ಮುಂಜಾಗರೂಕತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಕಾಂಕ್ರೀಟ್ ಕಾರ್ಯದ ಸಮಯದಲ್ಲಿ ಯಾವುದೇ ಗಾರೆ ಅಥವಾ ಗಟ್ಟಿ ಪದಾರ್ಥಗಲು ನೀರಿನ ಒಳಗೆ ಬೀಳದಂತೆ ಜಾಗರೂಕತೆ ವಹಿಸಬೇಕು.

ನಿರ್ಮಾಣ ಸಾಮಗ್ರಿ ಹಾಗೂ ಉತ್ಖನನ ವಸ್ತುಗಳನ್ನು ಸರಿಯಾಗಿ ಮುಚ್ಚಿ ಇಡಬೇಕು.

ನಿರ್ಮಾಣ ಸಲಕರಣೆಯನ್ನು ನಿಯಮಿತವಾಗಿ ಪರಿಶೀಲನೆ ಮಾಡಿ ಜಲ ಮಾಲಿನ್ಯವಾಗದಂತೆ ನೋಡಿಕೊಳ್ಳಬೇಕು. ನೀರಿನ ಒಳಗಡ ಯಂತ್ರೋಪಕರಣಗಳು ತೊಳೆದು ಹೋಗದಂತೆ ಜಾಗರೂಕತೆ ವಹಿಸಬೇಕು.

**ಕಡಲ / ಸಾಗರ ಪರಿಸರ**

**ನಿರೀಕ್ಷಿತ ಪರಿಸರ ಪರಿಣಾಮಗಳು:**

ಸಾಗರ ನೀರಿನ ಗುಣಮಟ್ಟ ತನ್ಮೂಲಕ ಬೆಳಕು ನುಗ್ಗುವ ಹಾಗು ದ್ಯುತಿಸಂಶ್ಲೇಷಕ ಚಟುವಟಿಕೆ ಮತ್ತು ಜಲತಳ ಆವಾಸಸ್ಥಾನಗಳಲ್ಲಿ ನಷ್ಟ  ಕಡಿಮೆ, ಪರಿಣಾಮವಾಗಿ ನೀರಿನಲ್ಲಿ ತಡೆಹಿಡಿಯಲಾದ ಘನ ಹೆಚ್ಚುತ್ತಿರುವ ಕಾರಣ ನೀರಿನಲ್ಲಿ ವಾಸಿಸುವ ಹಾಸಿಗೆಯ ಕೆಸರಿನಿಂದ ಬೆದರಿಕೆ ಪರಿಣಾಮ ಬೀರಬಹುದು. ನಿರ್ಮಾಣ ಚಟುವಟಿಕೆ ಕಾರನ ಪ್ರದೇಶದಲ್ಲಿ ಸಂಭವಿಸುವ ಜಲತಳ ಜೀವಿಗಳ ಮೇಲೆ ಪ್ರಭಾವ ಬಿರುತ್ತವೆ.

**ತಗ್ಗಿಸುವಿಕೆ ಕ್ರಮಗಳು:**

ಉತ್ಖನನ ಮತ್ತು ಪೇರಿಸುವುದರ ಪರಿಣಾಮ ಅಂತರ ಉಬ್ಬರವಿಳಿತ ಮತ್ತು ಉಪ ಉಬ್ಬರವಿಳಿತದ ಸಂಭಾವ್ಯ ಪ್ರಭಾವದ ಕಾರಣವಾಗಿರುತ್ತದೆ. ಇದು ಸ್ವಯಂಚಾಲಿತವಾಗಿ ಸ್ವಲ್ಪ ಸಮಯದಲ್ಲಿ ನಿವಾರಣೆಯಾಗುತ್ತದೆ. ಜಲತಳದ ಜೀವಿಗಲು ಅಂದರೆ ಪ್ಲಾಂಕನ್ ಮೊಟ್ಟೆಗಲು / ಲಾರ್ವಗಳು ಕಡಿಮೆ ಜೀವಿತ ಅವಧಿಯನ್ನು ಹೊಂದಿರುತ್ತದೆ ಮತ್ತು ಇವು ಕ್ರಮೇಣ ಬದಲಾವಣೆಗಳನ್ನು ನಿಭಾಯಿಸಲು ಶಕ್ತವಾಗಿರುತ್ತವೆ.

ಯೋಜನೆಯ ಪ್ರತಿಪಾದಕರು ಪ್ರತಿಕೂಲ ತೀರದ ಬದಲಾವಣೆಯ ತಪ್ಪಿಸಲು ಸಾಕಷ್ಟು ಅಡೆತಡೆಗಳನ್ನು, ಇಳಿಗಟ್ಟೆಗಳು, ವಾರ್ಸ್, ಸುಧಾರನೆ ಕ್ರಮಗಳು ಮತ್ತು ನಿರ್ಮಾಣಕ್ಕೆ ಸಾಕಷ್ಟು ಶಾಂತಿ ಒದಗಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು.

**ಸಾಮಾಜಿಕ – ಆರ್ಥಿಕ ಪರಿಸರ:**

**ನಿರೀಕ್ಷಿತ ಪರಿಸರ ಪರಿಣಾಮಗಳು:**

ಯೋಜನೆಯ ನಿರ್ಮಾಣ ಹಂತದ ಜೊತೆಗೆ ಸಂಬಂಧಿತವಾದ ವಾಹನ ದಟ್ಟಣೆಯು ಅಲ್ಪಾವದಿ ಋಣಾತ್ಮಕ ಪ್ರಭಾವವನ್ನು ಹೊಂದಿರುತ್ತದೆ.

**ತಗ್ಗಿಸುವಿಕೆ ಕ್ರಮಗಳು:**

ನಿರ್ಮಾಣ ಚಟುವಟಿಕೆಯಿಂದ ಯಾವುದೇ ತೊಂದರೆಯಾಗದಂತೆ ಸರಿಯಾದ ಸಂಚಾರ ನಿರ್ವಹಣೆಗೆ ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಚಟುವಟಿಕೆಗಳನ್ನು ನಿಯಂತ್ರಿಸಲು ನೌಕರರಿಗೆ ತರಬೇತಿ ಕೊಟ್ಟು, ಸಾಕಷ್ಟು ಸುರಕ್ಷತೆ ಸಂಕೇತಗಳು, ಸುರಕ್ಷಿತ ಸಾಧನಗಳನ್ನು ಒದಗಿಸಬೇಕಾಗುತ್ತದೆ. ಪ್ರಸ್ತಾಪಿತ ಯೋಜನೆಯಿಂದ ಯಾವುದೇ ನಷ್ಟ ಅಥವಾ ಅಡಚಣೆ ಮತ್ತು ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಮೇಲೆ ಕೆಡಕು ಉಂಟಾಗದಂತೆ ನೋಡಿಕೊಳ್ಳಬೇಕು.

**ಹಸಿರು ಪಟ್ಟಿ ಯೋಜನೆ:**

ಯೋಜನೆಯ ಪ್ರತಿಪಾದಕರು ಯೋಜನಾ ಪರಿಧಿಯಲ್ಲಿ ಹಾಗು ಆವರಣದಲ್ಲಿ ಎಲ್ಲಾ ಜಾತಿಯ ಮರಗಳ ಕನಿಷ್ಠ ಮೂರು ಸಾಲುಗಳನ್ನು ಒಳಗೊಂಡು ಹಸಿರು ಪಟ್ಟಿ ಯೋಜನೆಯನ್ನು ಅಭಿವೃದ್ಧಿಪಡಿಸಲು ಯೋಜಿಸಿದ್ದಾರೆ. ಒಂದು ವೇಳೆ ಸಾಕಷ್ಟು ಭೂಮಿಯು ಲಭ್ಯವಾಗದಿದ್ದಲ್ಲಿ ಪ್ರತಿಪಾದರು ಸ್ಥಳೀಯ ಸಂಸ್ಥೆಗಳೊಂದಿಗೆ ಸೇರಿಕೊಂಡು ಉದಾ: ಗ್ರಾಮಪಂಚಾಯತ್, ಶಾಲೆ, ಸರ್ಕಾರಿ ಜಾಗಗಳಲ್ಲಿ ಸಸಿಗಳನ್ನು ನೆಡಲು ಯೋಜನೆ ರೂಪಿಸಿದೆ. ಅದಲ್ಲದೆ ಯೋಜನೆಯ ರಸ್ತೆ ಬದಿಗಳಲ್ಲಿ ಸಸಿಗಳನ್ನು ನೆಡಲು ಯೋಜನೆ ರೂಪಿಸಲಾಗಿದೆ. ವ್ಯಾಪಕ ಅರಣ್ಯೀಕರಣ ಮತ್ತು ಸೌಂಧರ್ಯ ಪ್ರಜ್ಞೆಯನ್ನು ಹೆಚ್ಚಿಸಲು ಇದು ಸಹಕಾರಿಯಾಗಿದೆ. ಸಂಬಂಧಪಟ್ಟ ಪ್ರಾಧಿಕಾರದಿಂದ ಸಕಾಲದಲ್ಲಿ ಭೂಮಿಯನ್ನು ಆಯ್ಕೆ ಮಾಡಿ ಹಸಿರು ಪಟ್ಟಿಯನ್ನು ನಿರ್ಮಿಸಲು ಯೋಜನೆಯನ್ನು ರೂಪಿಸಿದೆ.

**ಸಾಮಾಜಿಕ ಏಳಿಗೆಯ ಯೋಜನೆ:**

ಯೋಜನೆಯ ಪ್ರತಿಪಾದಕರು ಸಕ್ರಿಯವಾಗಿ ಸಮಾಜ ಕಲ್ಯಾಣ ಚಟುವಟಿಕೆಗಳಲ್ಲಿ ತಮ್ಮನ್ನೂ ತೊಡಗಿಸಿಕೊಂಡು ಸಮಾಜ ಸುಧಾರಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಇದು ನೇರವಾಗಿ ಸಮಾಜ ಕಲ್ಯಾಣ ಮತ್ತು ಏಳಿಗೆಯ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿ ಹಣಕಾಸು ಮತ್ತು ಇತರ ನೆರವನ್ನು ಪರೋಕ್ಷವಾಗಿ ಸಮಾಜ ಕಲ್ಯಾಣ ಕಾರ್ಯ ನಡೆಸುವ ಸಂಸ್ಥೆಗಳಿಗೆ ನೀಡುತ್ತಾ ಬಂದಿದೆ.

ಮೂಲ ಸೌಕರ್ಯ ಮತ್ತು ಸೇವಾ ಬೆಂಬಲದ ಬೇಡಿಕೆಯ ಅಂದಾಜು ವೆಚ್ಚ ಪರಿಗಣಿಸಿ ಕೆ.ಎಫ್.ಡಿ.ಸಿ.ಯ ಆಡಳಿತ ಮಂಡಳಿಯ ಆಗತ್ಯ ಸೇವೆಗಳ ಗುರುತಿಸುವಿಕೆ, ನಿರ್ವಹಣೆ ಆಧಾರಿತ ಸಮೀಕ್ಷೆ ನಡೆಸುವುದು ಮತ್ತು ಐದು ವರ್ಷಗಳ ಕ್ರಿಯಾಶೀಲ ಯೋಜನೆ ಅನುಷ್ಠಾನಗೊಳಿಸಲು ನಿರ್ದಿಷ್ಟ ಆಯಾಮವನ್ನು ನಿಗದಿಪಡಿಸಲಾಗುವುದು.

**ಪರಿಸರ ನಿರ್ವಹಣಾ ವ್ಯವಸ್ಥೆಗೆ ಹಣಕಾಸಿನ ಸೌಲಭ್ಯ:**

ಪ್ರಸ್ತಾಪಿತ ಯೋಜನೆಗೆ ತಗಲುವ ವೆಚ್ಚ ನೂರ ಐವತ್ತು ಕೋಟಿ ರೂಪಾಯಿಗಳು.

ಪರಿಸರ ನಿರ್ವಹಣೆಗೆ ಹಣಕಾಸಿನ ವಿವರ:

| **ಕ್ರ.ಸಂ.** | **ವಿವರ** | **ಮೊತ್ತ(ಲಕ್ಷ)** |
|---|---|---|
| 1. | ಪರಿಸರ ನಿರ್ವಹಣಾ ವ್ಯವಸ್ಥೆ | 30 |
| 2. | ಹಸಿರುಪಟ್ಟಿ ಅಭಿವೃದ್ಧಿಗೆ | 15 |
| 3. | ವಾಯು ಮಾಲಿನ್ಯ ನಿರ್ವಹಣೆ | 25 |
| 4 | ಶಬ್ಧ ಮಾಲಿನ್ಯ ನಿಯಂತ್ರಣ | 15 |
| 5 | ಆರೋಗ್ಯ ಮತ್ತು ಸುರಕ್ಷತೆ | 15 |
| | ಒಟ್ಟು ಮೊತ್ತ | 100 |

ಉದ್ದೇಶಿತ ಯೋಜನೆಯ ಪರಿಸರ ನಿಯಂತ್ರಣ ವಾರ್ಷಿಕ ಮರುಕಳಿಸುವ ವೆಚ್ಚ ಒಟ್ಟು ಇ.ಎಮ್.ಎಸ್. ವೆಚ್ಚ 52 ಲಕ್ಷ ಎಂದು ಅಂದಾಜಿಸಲಾಗಿದೆ.